




## ಬುರುಜು; ಅನಾದಿಕಾಲದ ರುಜು

ಕೋಟೆ ಎಂಬ ಪದ ಕೇಳಿದ ಕೂಡಲೇ ಕೊತ್ತಲ ಎಂಬ ಪದವೂ ಅದರೊಡಗೂಡಿಯೇ ನೆನಪಾಗುತ್ತದೆ. ಏಕೆಂದರೆ ಕೋಟೆಕೊತ್ತಲವೆಂಬ ಪದಗಳು ಜನಮಾನಸದಲ್ಲಿ ಅಷ್ಟೊಂದು ಗರಿಷ್ಠವಾಗಿ ಬಳಕೆಗೊಂಡಿವೆ. ಕೊತ್ತಲ ಅಥವಾ ಬುರುಜುಗಳು ಅರಮನೆಯ ಅಥವಾ ರಾಜನ ಆಸ್ಥಾನದ ಹೆಬ್ಬಾಗಿಲ ಬಳಿ ಸೈನಿಕರಿಗೆ ಪಹರೆ ಕಾಯಲು ಸಹಾಯವಾಗುವಂತೆ ಕಟ್ಟಲಾದ ಕಟ್ಟಡಗಳಾಗಿವೆ. ನೆಲಮಟ್ಟದಿಂದ ಹತ್ತಾರು ಅಡಿ ಎತ್ತರದವರೆಗೆ ಇವುಗಳನ್ನು ಕಟ್ಟಿರುವುದರಿಂದ ಪಹರೆ ಕಾಯುವ ಸೈನಿಕರಿಗೆ ದೂರದಿಂದಲೇ ಅಪಾಯವನ್ನು ಗುರುತಿಸಲು ಸಾಧ್ಯವಾಗುತ್ತದೆ.

ಜೊತೆಗೆ ಯುದ್ಧದ ಸಂದರ್ಭದಲ್ಲಿ ಈ ಬುರುಜುಗಳು ಕೋಟೆಗೆ ರಕ್ಷಣಾ ಕವಚಗಳಾಗಿ ಉಪಯೋಗವಾಗುತ್ತಿದ್ದವು. ಅಷ್ಟಲ್ಲದೇ ಪಹರೆ ಕಾಯುವ ಸೈನಿಕರು ಇವುಗಳಲ್ಲಿ ಅಡಗಿ ಪ್ರತಿದಾಳಿ ನಡೆಸಲು ಸಹ ಇವುಗಳನ್ನು ಬಳಸುತ್ತಿದ್ದರು. ನೋಡಲು ಸಿಲಿಂಡರಿನಾಕಾರದಲ್ಲಿರುವ ಈ ಸುಂದರ ಬುರುಜುಗಳನ್ನು ನಿರ್ಮಿಸುವುದೂ ಸುಲಭದ್ದಲ್ಲ ಎಂಬುದು ಇವುಗಳ ವಿನ್ಯಾಸವನ್ನು ಗಮನಿಸಿದಾಗ ಅರ್ಥವಾಗುತ್ತದೆ. ಬಹುತೇಕ ಕೋಟೆಗಳಿಗೆ ಹೊಂದಿಕೊಂಡಂತೆ ಕಟ್ಟಲಾಗುವ ಈ ಬುರುಜುಗಳು ಕೆಲವು ವಿಶೇಷ ಸಂದರ್ಭಗಳಲ್ಲಿ ಕೋಟೆಗೆ ಸಮೀಪದ ಎತ್ತರದ ಪ್ರದೇಶಗಳಲ್ಲೂ ಸಹ ಕಟ್ಟಿರುತ್ತಾರೆ. ಯುದ್ಧದಲ್ಲಿ ತೀವ್ರವಾಗಿ ಗಾಯಗೊಂಡ ಸೈನಿಕಂತೆ ಅಸಹಾಯಕವಾಗಿ ಏಕಾಂಗಿಯಾಗಿ ನಿಂತಿರುವ ಈ ಬುರುಜನ್ನು ಕಂಡಾಗ ರಾಜರಯುಗ ಮಾಯವಾಗಿ ಕೋಟೆಗಳೆಲ್ಲಾ ಮಣ್ಣುಪಾಲಾಗಿರುವ ಈ ದಿನಮಾನಗಳಲ್ಲಿ ಇದೊಂದು ಅನಾದಿಕಾಲದ ಪಳಿಯುಳಿಕೆ ಕಂಡಂತೆ ಭಾಸವಾಗುತ್ತದೆ.

ಒಂದು ಕಾಲದಲ್ಲಿ ರಕ್ಷಣೆಗಾಗಿ ಕಟ್ಟಲಾಗಿದ್ದ ಈ ಕಟ್ಟಡಗಳು ಇಂದು ತಮ್ಮ ರಕ್ಷಣೆಗಾಗಿ ನಮ್ಮನ್ನು ಆಸೆಕಂಗಳಿಂದ ನೋಡುತ್ತಿವೆ. ಇವುಗಳು ಸಂಪೂರ್ಣ ನಶಿಸಿ ನೆಲಸಮವಾಗುವ ಮುನ್ನ ಈ ಸ್ಮಾರಕಗಳ ರಕ್ಷಣೆಗೆ ನಾವೆಲ್ಲಾ ಮುಂದಾಗಬೇಕು. ಅಂದಹಾಗೆ ಈ ಬುರುಜು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹೆಗ್ಡಾಳು ಮತ್ತು ಅಂಕಸಮುದ್ರ ಗ್ರಾಮಗಳ ನಡುವಣ ಕಂಡುಬರುತ್ತದೆ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**





## ಬಿಳಿ ಮಂದಾರ ಕಂಡಿರಾ...

ಈಚೆಗೆ ಶಿವಮೊಗ್ಗದ ಪುಟ್ಟ ಗ್ರಾಮ ಚಿಕ್ಕೌಂಸಿ ಹೊಸೂರಿಗೆ ಮೊಮ್ಮಗಳೊಂದಿಗೆ ಹೋಗಿದ್ದೆ. ಹೋಗುವಾಗ ರಸ್ತೆಯ ಬದಿಯ ಪೊದೆಯಲ್ಲಿ ಬಿಳಿ ಹೂವೊಂದು ಗಮನಸೆಳೆಯಿತು. ನೋಡಲು ಆಕರ್ಷಕವಾಗಿದ್ದ ಆ ಹೂವಿನ ಕೆಳಭಾಗದಲ್ಲಿ ಹಸಿರು ಮೆಣಸಿನಕಾಯಿಗಳಂತೆ ಹೂವಿನ ಮೊಗ್ಗುಗಳು ಕಂಡವು. ಅದನ್ನು ಗಮನಿಸಿದ ಮೊಮ್ಮಗಳು, 'ಅಜ್ಜಿ ಅಜ್ಜಿ... ಇದು ಗ್ರೀನ್ ಚಿಲ್ಲಿ ಪ್ಲಾಂಟಾ' ಎಂದು ಪ್ರಶ್ನಿಸಿದಳು. ಗಿಡದ ಬಗ್ಗೆ ನನಗೂ ಸರಿಯಾಗಿ ಗೊತ್ತಿಲ್ಲದಿದ್ದರಿಂದ, 'ಇದು ಮೆಣಸಿನಕಾಯಿ ಗಿಡವಂತೂ ಅಲ್ಲ' ಎಂದು ಹೇಳಿ ಹೂವಿನ ಚಿತ್ರಗಳನ್ನು ಕ್ಲಿಕ್ಕಿಸಿ ಮನೆಗೆ ಬಂದೆ.

ಚಿತ್ರಗಳನ್ನು ಗೂಗಲ್‌ನಲ್ಲಿ ಹುಡುಕಿದಾಗ ಇದು 'ಬಿಳಿ ಮಂದಾರ ಹೂವು' ಎಂದು ಗೊತ್ತಾಯಿತು. ಆಂಗ್ಲ ಭಾಷೆಯಲ್ಲಿ ಇದನ್ನು ಬೌಹಿನಿಯಾ ಅಕ್ಯುಮಿನೇಟಾ (**Bauhinia acuminata**) ಎಂದು ಕರೆಯುತ್ತಾರೆ. ಇದು ಫ್ಯಾಬೇಸಿ ಕುಟುಂಬಕ್ಕೆ ಸೇರಿದ್ದು. 'ಡ್ವಾರ್ಫ್ ವೈಟ್ ಆರ್ಕಿಡ್ ಟ್ರೀ' ಎಂದೂ ಕರೆಯಲಾಗುವ 'ಬೌಹಿನಿಯಾ ಅಕ್ಯುಮಿನಾಟಾ'ದ ಈ ಹೂವು ಐದು ದಳಗಳೊಂದಿಗೆ, ಹತ್ತು ಹಳದಿ ತುದಿಯ ಕೇಸರಗಳನ್ನು ಹೊಂದಿದೆ. ಇವು 8 ರಿಂದ 12 ಸೆಂ. ಮೀ. ವ್ಯಾಸ ಇವೆ. ಇದು ಪೊದೆಯ ಸಸ್ಯವಾಗಿದ್ದು, ಆಲಂಕಾರಿಕ ಸಸ್ಯವನ್ನಾಗಿಯೂ ಬೆಳೆಸಬಹುದು.

**–ಅನುರಾಧ ಟಿ., ದಾವಣಗೆರೆ**